# ಕರ್ನಾಟಕ ಸರ್ಕಾರ
## ರೇಷ್ಮೆ ಇಲಾಖೆ

# ರೇಷ್ಮೆ ಉಪ ನಿರ್ದೇಶಕರ ಕಚೇರಿ,
# ಜಿಲ್ಲಾ ಪಂಚಯತ್,
# ರಾಮನಗರ

## ಮಾಹಿತಿ ಹಕ್ಕು ಅಧಿನಿಯಮ-2005
## {4(1)(ಬಿ) ನ 2022-23 ರ ಮಾಹಿತಿಗಳು}

**ದಿನಾಂಕ:25.01.2024**

## 4(1)(ಬಿ) (i) ರಾಮನಗರ ಜಿಲ್ಲೆಯ ಇಲಾಖೆಯ ಸಂಘಟನೆ, ಚಟುವಟಿಕೆಗಳು ಮತ್ತು ಕರ್ತವ್ಯಗಳ ವಿವರಗಳು:

## ರಾಮನಗರ ಜಿಲ್ಲೆ ರೇಷ್ಮೆ ಇಲಾಖೆ ಸಂಘಟನೆ ಮತ್ತು ಇಲಾಖೆಯ ಕಾರ್ಯ ಚಟುವಟಿಕೆಗಳು:

ಸಂಘಟನೆ:–

ರೇಷ್ಮೆ ಉಪ ನಿರ್ದೇಶಕರು, ಜಿ.ಪಂ. ರಾಮನಗರ ಕಚೇರಿಯು ಜಿಲ್ಲಾ ಮಟ್ಟದ ಕಚೇರಿಯಾಗಿದ್ದು, ಈ ಕಚೇರಿಯ ಆಡಳಿತ ವ್ಯಾಪ್ತಿಗೆ 03 ತಾಲ್ಲೂಕುಗಳು ಒಳಪಡಲಿದ್ದು, 03 ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿ, 13 ತಾಂತ್ರಿಕ ಸೇವಾ ಕೇಂದ್ರಗಳು ಮತ್ತು 04 ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರಗಳು ಅಧಿಕಾರದ ವ್ಯಾಪ್ತಿಗೆ ನಿಯಂತ್ರಣಾಧಿಕಾರಿಗಳಾಗಿ ರೇಷ್ಮೆ ಉಪ ನಿರ್ದೇಶಕರು ಕೆಲಸ ನಿರ್ವಹಿಸುತ್ತಿದ್ದಾರೆ.

ರಾಮನಗರ ಜಿಲ್ಲೆ ರೇಷ್ಮೆ ಇಲಾಖೆಯ ರೇಷ್ಮೆ ಕೃಷಿ ಚಟುವಟಿಕೆಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ರೇಷ್ಮೆ ಉಪ ನಿರ್ದೇಶಕರು, ಜಿ.ಪಂ. ರಾಮನಗರ ರವರ ನೇತೃತ್ವದಲ್ಲಿ ಇಲಾಖೆಯ ವಿವಿಧ ವೃಂದದ ತಾಂತ್ರಿಕ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ರೇಷ್ಮೆ ಕೃಷಿ ಅಭಿವೃದ್ಧಿಯ ವಿವಿಧ ಹಂತದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಇಲಾಖೆಯ ತಾಂತ್ರಿಕ ವಿಭಾಗ, ಆಡಳಿತ ವಿಭಾಗ *ರೇಷ್ಮೆ ಉಪ ನಿರ್ದೇಶಕರ ಮಾರ್ಗದರ್ಶದಲ್ಲಿ ಇಲಾಖೆಯ ವಿವಿಧ ಚಟುವ*ಟಿಕೆಗಳನ್ನು ನಿರ್ವಹಿಸುತ್ತದೆ. ಕ್ಷೇತ್ರ ಮಟ್ಟದಲ್ಲಿ ವಿವಿಧ ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ವಿಸ್ತರಣಾ ಕಾರ್ಯ ನಿರ್ವಹಿಸುತ್ತಾರೆ. ರಾಮನಗರ ಜಿಲ್ಲೆಯ ಸಿಬ್ಬಂದಿ ವರ್ಗಗಳ ಸಂಘಟನೆಯ ಜಿಲ್ಲೆಯ ವಿವರ ತೋರಿಸುವ ತಃಖ್ತೆಯನ್ನು ಮುಂದಿನ ಪುಟದಲ್ಲಿ ತೋರಿಸಲಾಗಿದೆ. ರೇಷ್ಮೆ ಉಪ ನಿರ್ದೇಶಕರು, ಜಿ.ಪಂ. ರಾಮನಗರ ರವರ ಆಡಳಿತ ವ್ಯಾಪ್ತಿಯಲ್ಲಿ ಈಗ 516 ಮಂಜೂರಾದ ವಿವಿಧ ವೃಂದದ ಹುದ್ದೆಗಳಿದ್ದು, 154 ಅಧಿಕಾರಿ/ ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸುತ್ತಿದ್ದಾರೆ.

ರಾಮನಗರ ಜಿಲ್ಲೆಯ ರೇಷ್ಮೆ ಇಲಾಖೆಯ ಕರ್ತವ್ಯಗಳು ಮತ್ತು ಕಾರ್ಯ ಚಟುವಟಿಕೆಗಳು:–

ರೇಷ್ಮೆ ಇಲಾಖೆಯು ರಾಮನಗರ ಜಿಲ್ಲೆಗೆ ರೇಷ್ಮೆ ಕೃಷಿ ಚಟುವಟಿಕೆಗಳ ಅಭಿವೃದ್ಧಿಗಾಗಿ ಕೆಳಕಂಡ ಮುಖ್ಯ ಸೇವೆಗಳನ್ನು ಒದಗಿಸುತ್ತಿದೆ.

1) ರೇಷ್ಮೆ ಕೃಷಿ ಚಟುವಟಿಕೆಗಳಾದ ಹಿಪ್ಪುನೇರಳೆ ವ್ಯವಸಾಯ ಮತ್ತು ರೇಷ್ಮೆ ಹುಳು ಸಾಕಾಣಿಕೆ ಇತ್ಯಾದಿಗಳ ಬಗ್ಗೆ ತಾಂತ್ರಿಕ ಮಾರ್ಗದರ್ಶನ ನೀಡುವುದು ಮತ್ತು ತರಬೇತಿ ಒದಗಿಸುವುದು.
2) ಸಂಶೋಧನಾ ಸಂಸ್ಥೆಗಳಿಂದ ಅಧಿಕ ಇಳುವರಿ ನೀಡುವ ಹಿಪ್ಪುನೇರಳೆ ಮತ್ತು ರೇಷ್ಮೆ ಹುಳುವಿನ ತಳಿಗಳನ್ನು ಅಭಿವೃದ್ಧಿ ಪಡಿಸಿ ರೈತರಿಗೆ ಒದಗಿಸುವುದು.
3) ಹಿಪ್ಪುನೇರಳೆ ಹಾಗೂ ರೋಗ ರಹಿತ ಮೊಟ್ಟೆ ಮತ್ತು ಚಾಕಿ ಹುಳುಗಳನ್ನು ರೈತರಿಗೆ ಒದಗಿಸಲು ವ್ಯವಸ್ಥೆಗಳನ್ನು ರೂಪಿಸುವುದು.
4) ರೇಷ್ಮೆ ಬೆಳೆಗಾರರಿಗೆ, ವಿಸ್ತರಣೆ, ಚಾಕಿ ಸಾಕಾಣೆಕೆ ಮತ್ತು ರೋಗ ನಿಯಂತ್ರಣ ಸೌಲಭ್ಯಗಳನ್ನು ಒದಗಿಸುವುದು.
5) ರೇಷ್ಮೆ ಚಟುವಟಿಕೆಗಳಿಗಾಗಿ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ಪಡೆಯಲು ರೈತರಿಗೆ ಸಹಾಯ ಮಾಡುವುದು.

## 4(1)(ಬಿ) (ii) ಅಧಿಕಾರಿಗಳು ಮತ್ತು ಸಿಬ್ಬಂದಿಯ ಅಧಿಕಾರ ಮತ್ತು ಕರ್ತವ್ಯಗಳು

| ಅಧಿಕಾರಿಗಳ ಮತ್ತು ಸಿಬ್ಬಂದಿಯ ಅಧಿಕಾರಗಳು ಮತ್ತು ಕರ್ತವ್ಯಗಳು | | |
|---|---|---|
| 1 | 1 | ಅಧಿಕಾರಗಳು: ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಐ/267/ಎಸ್.ಎಲ್.ಎಸ್./79, ದಿ:01/06/1981 ರಲ್ಲಿ ಹೊರಡಿಸಿರುವ ಅಧಿಕಾರ ಪ್ರತ್ಯಾ ಯೋಜನೆ, ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ/1/ಟಿಎಫ್‌ಪಿ/2001 ದಿನಾಂಕ:02/02/2001ರ ಆರ್ಥಿಕ ಪ್ರತ್ಯಾ ಯೋಜನೆ ಮತ್ತು ಸರ್ಕಾರದ ಆದೇಶ ಸಂಖ್ಯೆ:ವಾಕೈ/ 47/ರೇಕೃವಿ/94, ದಿನಾಂಕ:17/10/2002 ರ ಆರ್ಥಿಕ ಪ್ರತ್ಯಾ ಯೋಜನೆ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮಗಳ 2000 ಗಳ ಪ್ರಕಾರ ಅಧಿಕಾರ ಪ್ರತ್ಯಾಯೋಜನೆ ಅನುಸರಿಸಿ ಆಯಾ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಾರೆ. |
| II | ಕರ್ತವ್ಯಗಳು:– | |
| ರೇಷ್ಮೆ ಉಪ ನಿರ್ದೇಶಕರು:– | | |
| ರೇಷ್ಮೆ ಉಪ ನಿರ್ದೇಶಕರು, ರೇಷ್ಮೆ ಇಲಾಖೆ ರಾಮನಗರ ಜಿಲ್ಲೆಯ ಮುಖ್ಯಸ್ಥರಾಗಿದ್ದು, ಎಲ್ಲಾ ತಾಂತ್ರಿಕ ಮತ್ತು ಆಡಳಿತಾತ್ಮಕ ಕೆಲಸ ಕಾರ್ಯಗಳು ಅವರ ಉಸ್ತುವಾರಿಯಲ್ಲಿ ನಡೆಯುತ್ತವೆ ಹಾಗೂ ಜಿಲ್ಲೆಗೆ ಸಂಬಂಧಿಸಿದ ಕ್ರಿಯಾ ಯೋಜನೆ ರೂಪಿಸುವುದು ಮತ್ತು ಅದರ ಯಶಸ್ವಿ ಅನುಷ್ಠಾನಗೊಳಿಸಿ ನಿಗದಿಪಡಿಸಿದ ಗುರಿಗಳನ್ನು ಸಾಧಿಸುವುದು, ರೋಗ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವುದು, ಅಧೀನ ಸಂಸ್ಥೆಗಳ ಮತ್ತು ಕಾರ್ಯಕ್ರಮಗಳ ಪರಿಶೀಲನೆ, ಪರಿವೀಕ್ಷಣೆ ಮತ್ತು ಉಸ್ತುವಾರಿ ನಡೆಸುವುದು, ವ್ಯಾಪ್ತಿ ಮೀರಿದ ಲೋಪದೋಷ ಕಂಡುಬಂದಲ್ಲಿ ಹಿರಿಯ ಅಧಿಕಾರಿಗಳ ಗಮನಕ್ಕೆ ತರುವುದು. | | |
| ರೇಷ್ಮೆ ಸಹಾಯಕ ನಿರ್ದೇಶಕರು:– | | |
| ರಾಮನಗರ ಜಿಲ್ಲೆಯ ಸಿಬ್ಬಂದಿ ಮತ್ತು ಆಡಳಿತ ಹಾಗೂ ತಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ರೇಷ್ಮೆ ಉಪ ನಿರ್ದೇಶಕರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸುವುದು. ಅಧಿಕಾರಿ / ನೌಕರರ ಸೇವಾ ವಿಷಯದ ಬಗ್ಗೆ ಪರಿಶೀಲನೆ / ನಿರ್ವಹಣೆ. ನ್ಯಾಯಾಲಯ ಪ್ರಕರಣ, ಅಧಿಕಾರಿ/ ನೌಕರರ ಕೆಲಸ ಕಾರ್ಯಗಳಲ್ಲಿ ಕರ್ತವ್ಯಲೋಪ, ಹಣಕಾಸಿನ ದುರುಪಯೋಗಗಳ ಬಗೆಗಿನ ಆರೋಪಗಳ ತನಿಖೆಯ ವಿಷಯಗಳ ನಿರ್ವಹಣೆ, ಲೇಖನ ಸಾಮಗ್ರಿ / ವಾಹನ/ ದೂರವಾಣಿಗಳಿಗೆ ಸಂಬಂಧಿಸಿದ ವಿಷಯಗಳ ನಿರ್ವಹಣಾ ಕಾರ್ಯ ನಿರ್ವಹಿಸುವುದು. | | |

ರೇಷ್ಮೆ ಸಹಾಯಕ ನಿರ್ದೇಶಕರು:–

| | | |
|---|---|---|
| 1 | ವಿಭಾಗೀಯ | ತಮ್ಮ ವ್ಯಾಪ್ತಿಯ ಇಲಾಖೆ ಸಂಸ್ಥೆಗಳ ಮೇಲ್ವಿಚಾರಣೆ, ಉಸ್ತುವಾರಿ ಮತ್ತು ಪರಿಶೀಲನೆ, ನಿಗಧಿಪಡಿಸುವ ಗುರಿ, ಸಾಧನೆಗೆ ಕ್ರಿಯಾ ಯೋಜನೆ ರೂಪಿಸಿ, ಅನುಷ್ಠಾನಗೊಳಿಸುವುದು. ಸಂಬಂಧಿಸಿದ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಅನುಜ್ಞಾ ಪತ್ರಗಳ ನವೀಕರಣ ಮತ್ತು ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಮಾಹಿತಿ ಸಂಗ್ರಹಣೆ ಮತ್ತು ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದ ಕಡತಗಳ ನಿರ್ವಹಣೆ, ಪ್ರಗತಿ ಪರಿಶೀಲನಾ ವರದಿ ತಯಾರಿಕೆ, ಸಭೆಗಳ ನಡವಳಿಗಳನ್ನು ತಯಾರಿಸುವುದು ಮತ್ತು ಅನುಸರಣಾ ಕ್ರಮಗಳು, ಅಧೀನ ಅಧಿಕಾರಿ, ಸಿಬ್ಬಂದಿಯೊಡನೆ ಸಮನ್ವಯ ಸಾಧಿಸಿ ಕಡತಗಳ ಶೀಘ್ರ ವಿಲೇವಾರಿಗೆ ಕ್ರಮಕೈಗೊಳ್ಳುವುದು. |

**ರೇಷ್ಮೆ ವಿಸ್ತರಣಾಧಿಕಾರಿಗಳು:–**

| | | |
|---|---|---|
| 2 | ತಾಂತ್ರಿಕ ಸೇವಾ ಕೇಂದ್ರ | ರಾಮನಗರ ಜಿಲ್ಲೆ ರೇಷ್ಮೆ ಇಲಾಖೆಯಲ್ಲಿ ವಿವಿಧ ಫಲಾನುಭವಿಯಾಧಾರಿತ ಕಾರ್ಯಕ್ರಮಗಳು ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ರೇಷ್ಮೆ ಬೆಳೆಗಾರರಿಗೆ ಇಲಾಖೆಯ ತಾಂತ್ರಿಕ ಮಾಹಿತಿಗಳು ವಿವಿಧ ಯೋಜನೆಯ ಕಾರ್ಯಕ್ರಮಗಳು ಹಿಪ್ಪುನೇರಳೆ ಹೊಸನಾಟಿ ಕಾರ್ಯಕ್ರಮ ದ್ವಿತಳಿ ಚಾಕಿ ಕಾರ್ಯಕ್ರಮ ಗೂಡು ಉತ್ಪಾದನೆ ಕಾರ್ಯಕ್ರಮಗಳ ಗುರಿ ಹೊಂದಿದ್ದು, ಸರ್ಕಾರದಿಂದ ಬಿಡುಗಡೆಯಾಗುವ ಸಹಾಯಧನ ಸೌಲಭ್ಯ ಕುರಿತು ಇದರ ಉಸ್ತುವಾರಿಗಳು, ರೇಷ್ಮೆ ವಿಸ್ತರಣಾಧಿಕಾರಿ ಮತ್ತು ವಲಯಾಧಿಕಾರಿಕಾರಿಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿ ಹೊಂದಿರುತ್ತಾರೆ. |
| 3 | ರೇಷ್ಮೆ ಕೃಷಿ ಕ್ಷೇತ್ರಗಳು | ಜಿಲ್ಲೆಯಲ್ಲಿ ಒಟ್ಟು 04 ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರಗಳು ಈ ಕಚೇರಿಯ ಆಡಳಿತ ವ್ಯಾಪ್ತಿಗೊಳಪಡಲಿದ್ದು, ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ, ಇಗ್ಗಲೂರು, ಕಣ್ವ ಮತ್ತು ಸುಗ್ಗನಹಳ್ಳಿ ಸಂಸ್ಥೆಗಳು 2000ಇಸವಿಯಿಂದ ಯಾವುದೇ ಕಾರ್ಯ ಚಟುವಟಿಕೆಗಳಿಲ್ಲದೆ ಸ್ಥಗಿತಗೊಂಡಿರುತ್ತದೆ. ರಾಮನಗರ ತಾಲ್ಲೂಕಿನ ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ, ಕೆ.ಪಿ.ದೊಡ್ಡಿ ಮಾತ್ರ ಕಾರ್ಯ ಚಟುವಟಿಕೆಗಳು ಅನುಷ್ಠಾನವಾಗುತ್ತಿದ್ದು, ಸದರಿ ರೇಷ್ಮೆ ಕೃಷಿ ಕ್ಷೇತ್ರವು ಪಿ2 ರೇಷ್ಮೆ ಕೃಷಿ ಕ್ಷೇತ್ರವಾಗಿದ್ದು, ಈ ಸಂಸ್ಥೆಯಲ್ಲಿ ವಾರ್ಷಿಕ ಪಿ2 ಬಿತ್ತನೆ ಗೂಡುಗಳನ್ನು ಉತ್ಪಾದನೆ ಮಾಡಿ ಇಲಾಖೆಯ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಗಳಿಗೆ ರೇಷ್ಮೆ ಮೊಟ್ಟೆ ಉತ್ಪಾದನೆಗಾಗಿ ಸರಬರಾಜು ಮಾಡಲಾಗುವುದು. |

**4(1)(ಬಿ) (iii) ಉತ್ತರದಾಯಿತ್ವ ಮತ್ತು ಮೇಲ್ವಿಚಾರಕ ಸಹಿತ, ನಿರ್ಧರಣಾ ಪ್ರಕ್ರಿಯೆಯಲ್ಲಿ ಅನುಸರಿಸುವ ವಿಧಿವಿಧಾನಗಳು:–**

**ಉಸ್ತುವಾರಿ ಮತ್ತು ಹೊಣೆಗಾರಿಕೆ ಸೇರಿದಂತೆ ನೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪಾಲಿಸಬೇಕಾದ ವಿಧಿ – ವಿಧಾನಗಳು**

**ರೇಷ್ಮೆ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ವಿತ್ತೀಯ ಪ್ರತ್ಯಾಧಿಕಾರ**

| ಕ್ರ ಸಂ. | ಕಾರ್ಯಕ್ರಮದ ವಿವರ | ಅಧಿಕಾರ ಪ್ರತ್ಯಾಯೋಜನೆ | |
|---|---|---|---|
| | | ರೇಷ್ಮೆ ಉಪ ನಿರ್ದೇಶಕರು | ರೇಷ್ಮೆ ಸಹಾಯಕ ನಿರ್ದೇಶಕರು |
| 1 | ಫಲಾನುಭವಿ ಆಧಾರಿತ ಕಾರ್ಯಕ್ರಮಗಳು ಹಾಗೂ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸಹಾಯಧನ/ ಪ್ರೋತ್ಸಾಹಧನ ಮಂಜರಾತಿ | (ಪ್ರತಿ ಪ್ರಕರಣ) ರೂ.50001/– ರಿಂದ ರೂ.200000/– ವರೆಗೆ (ಪ್ರತಿ ಪ್ರಕರಣಕ್ಕೆ) | (ಪ್ರತಿ ಪ್ರಕರಣ) ರೂ.25001/– ರಿಂದ ರೂ.50000/–ವರೆಗೆ (ಪ್ರತಿ ಪ್ರಕರಣಕ್ಕೆ) |

**4(1)(ಬಿ) (iv)** ಇಲಾಖೆಯ ಕಾರ್ಯ ನಿರ್ವಹಣೆಯಲ್ಲಿ ಅನುಸರಿಸುವ ನಿಯಮಗಳು

ಇಲಾಖೆಯ ಆಡಳಿತಾತ್ಮಕ ಕೆಲಸ ಕಾರ್ಯಗಳು ಕರ್ನಾಟಕ ನಾಗರೀಕ ಸೇವಾ ನಿಯಮಗಳಂತೆ, ಆರ್ಥಿಕ ಕೆಲಸ ಕಾರ್ಯಗಳು ಕರ್ನಾಟಕ ಆರ್ಥಿಕ ಸಂಹಿತೆ, ಖರೀದಿ ಪ್ರಕ್ರಿಯೆಗಳು ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು ಮತ್ತು ಸರ್ಕಾರದಿಂದ ಹೊರಡಿಸುವ ಅಧಿಸೂಚನೆಗಳನ್ವಯ ಮಾಡಲಾಗುತ್ತದೆ. ಇಲಾಖೆಯ ತಾಂತ್ರಿಕ ಕೆಲಸ ಕಾರ್ಯಗಳು ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಟ ನಿಯಂತ್ರಣ) ಕಾಯಿದೆ 1959 ಮತ್ತು ನಿಯಮಾವಳಿಗಳು 1960 ರಂತೆ ನಿರ್ವಹಿಸಲಾಗುತ್ತಿದೆ. ಇದಲ್ಲದೆ ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಅಧಿಸೂಚನೆಗಳು ಮತ್ತು ಸುತ್ತೋಲೆಗಳನ್ನು ಪಾಲಿಸಲಾಗುತ್ತಿದೆ.

**4(1)(ಬಿ) (v)** ಕರ್ತವ್ಯ ನಿರ್ವಹಿಸುವಲ್ಲಿ ಅನುಸರಿಸಲಾಗುವ ಕಾಯಿದೆ ಮತ್ತು ನಿಯಮಗಳು

ಸಂಸ್ಥೆಯ ಅಧಿಕಾರಿ: ಸಿಬ್ಬಂದಿಗಳು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಅನುಸರಿಸುವ ಬಗ್ಗೆ ನಿಯಮಗಳು, ಆದೇಶ ಮತ್ತು ಅಧಿಸೂಚನೆಗಳು ಮತ್ತು ನಿರ್ವಹಿಸುವ ಬಗ್ಗೆ ದಾಖಲೆಗಳು

ರೇಷ್ಮೆ ಇಲಾಖೆಯ ಅಧಿಕಾರಿ: ಸಿಬ್ಬಂದಿ ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ಮತ್ತು ನಿಯಮಗಳು 1960ರ ನಿಯಮಗಳನ್ವಯ ಕಾರ್ಯ ನಿರ್ವಹಿಸುತ್ತಾರೆ.

ಆರ್ಥಿಕ ಪ್ರತ್ಯಾಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ:ಸಿಐ/267/ ಎಸ್‌ಎಲ್‌ಎಸ್/79, ದಿನಾಂಕ:1/06/1981 ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ/1/ ಟಿಎಫ್‌ಪಿ/2001 ದಿ:02/02/2001 ಮತ್ತು ಸರ್ಕಾರದ ಆದೇಶ ಸಂಖ್ಯೆ:ವಾಕೈ/47/ರೇಕೃವಿ/94, ದಿನಾಂಕ:17/10/2002 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000 ಗಳನ್ನು ಅನುಸರಿಸಿ ಕಾರ್ಯ ನಿರ್ವಹಿಸುತ್ತಾರೆ.

## 2022–23ನೇ ಸಾಲಿನಲ್ಲಿ ರಾಮನಗರ ಜಿಲ್ಲೆಗೆ ವಿವಿಧ ಯೋಜನೆಗಳಡಿ ಬಿಡುಗಡೆಯಾದ ಅನುದಾನ ಮತ್ತು ವೆಚ್ಚ ವಿವರಗಳು (ರೂ.ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆ | ಲೆಕ್ಕಶೀರ್ಷಿಕೆ | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|---|
| ರಾಜ್ಯ ವಲಯ ಕಾರ್ಯಕ್ರಮಗಳು | | | | |
| 1 | ರೇಷ್ಮೆ ಅಭಿವೃದ್ಧಿ ಯೋಜನೆ (ಸಾಮಾನ್ಯ) | 2851–00–107–1–35(106) | 48.40 | 48.369 |
| 2 | ರೇಷ್ಮೆ ಅಭಿವೃದ್ಧಿ ಯೋಜನೆ (ವಿ.ಘ.ಯೋ) | 2851–00–107–1–35(422) | 14.175 | 14.125 |
| 3 | ರೇಷ್ಮೆ ಅಭಿವೃದ್ಧಿ ಯೋಜನೆ (ಗಿ.ಉ.ಯೋ) | 2851–00–107–1–35(423) | 0.81 | 0.81 |
| 4 | ಬೆಲೆ ಸ್ಥಿರಿಕರಣ ನಿಧಿ ಗೂಡಿಗೆ ಪ್ರೋತ್ಸಾಹಧನ | 2851–00–107–1–51(106) | 17.02 | 17.016 |
| 5 | ರೇಷ್ಮೆ ವಿಸ್ತರಣಾ ಕಾರ್ಯಕರ್ತರ ಗೌರವಧನ | 2851–00–107–1–35(015) | 7.670 | 7.563 |
| 6 | ಕ್ಲಸ್ಟರ್ ಕಾರ್ಯಕ್ರಮ | 2851–00–107–1–35(059) | 0.60 | 0.60 |
| 7 | ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆ | 2851–00–107–1–35(059) | 18.107 | 18.107 |
| 8 | ಅಮೃತ ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆ | 2435–01–101–0–01(103) | 36.771 | 36.751 |
| 9 | ಅಮೃತ ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆ(SDP) | 2435–01–101–0–01(133) | 0.50 | 0.25 |
| ಒಟ್ಟು | | | **144.053** | **143.591** |
| ಕೇಂದ್ರ ವಲಯ ಕಾರ್ಯಕ್ರಮಗಳು | | | | |
| 10 | PFMS ಹನಿ ನೀರಾವರಿಗೆ ಸಹಾಯಧನ(ಸಾಮಾನ್ಯ) | 2401–00–108–2–30(106) | 91.489 | 64.841 |
| 11 | PFMS ಹನಿ ನೀರಾವರಿಗೆ ಸಹಾಯಧನ (ವಿ.ಘ.ಯೋ) | 2401–00–108–2–30(422) | 18.689 | 12.76 |
| 12 | PFMS ಹನಿ ನೀರಾವರಿಗೆ ಸಹಾಯಧನ (ಗಿ.ಉ.ಯೋ) | 2401–00–108–2–30(423) | 1.00 | 0.749 |
| 13 | ಸಿಲ್ಕ್ ಸಮಗ್ರ ಯೋಜನೆ(ಸಾಮಾನ್ಯ) (ರಾಜ್ಯದ ಪಾಲು) | 2851–00–107–1–35(106) | 499.063 | 497.983 |
| 14 | ಸಿಲ್ಕ್ ಸಮಗ್ರ ಯೋಜನೆ(ವಿ.ಘ.ಯೋ) (ರಾಜ್ಯದ ಪಾಲು) | 2851–00–107–1–35(422) | 38.563 | 38.515 |
| 15 | ಸಿಲ್ಕ್ ಸಮಗ್ರ ಯೋಜನೆ(ಗಿ.ಉ.ಯೋ) (ರಾಜ್ಯದ ಪಾಲು) | 2851–00–107–1–35(423) | 2.938 | 2.934 |
| 16 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಸಾಮಾನ್ಯ) | 2401–00–800–1–57(106) | 26.363 | 26.353 |
| 17 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ವಿ.ಘ.ಯೋ) | 2401–00–800–1–57(422) | 4.003 | 4.002 |
| 18 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಗಿ.ಉ.ಯೋ) | 2401–00–800–1–57(423) | 1.1807 | 1.1807 |
| ಒಟ್ಟು | | | **683.2887** | **649.3177** |
| ಜಿಲ್ಲಾ ವಲಯ ಕಾರ್ಯಕ್ರಮಗಳು | | | | |
| 19 | ರೇಷ್ಮೆ ಬೆಳೆಗಾರರಿಗೆ ಸಹಾಯ (ಸಾಮಾನ್ಯ) | 2851–00–104–0–30(100) | 66.76 | 66.701 |
| 20 | ರೇಷ್ಮೆ ಬೆಳೆಗಾರರಿಗೆ ಸಹಾಯ (ವಿ.ಘ.ಯೋ) | 2851–00–104–0–30(422) | 16.94 | 16.89 |
| 21 | ರೇಷ್ಮೆ ಬೆಳೆಗಾರರಿಗೆ ಸಹಾಯ (ಗಿ.ಉ.ಯೋ) | 2851–00–104–0–30(423) | 6.30 | 3.279 |
| 22 | ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮ | 2851–00–104–0–61(100) | 15.00 | 14.75 |
| 23 | ಅಧಿಕಾರಿ/ ಸಿಬ್ಬಂದಿ ವೇತನ | 2851–00–107–0–26(005) | 235.39 | 233.784 |
| 24 | ದಿನಗೂಲಿ ನೌಕರರ ವೇತನ | 2851–00–107–0–26(033) | 53.82 | 33.882 |
| 25 | ಹೊರಗುತ್ತಿಗೆ ನೌಕರರ ವೇತನ | 2851–00–107–0–26(034) | 25.22 | 10.284 |
| 26 | ಇತರೆ ವೆಚ್ಚ | 2851–00–107–0–26(090) | 203.00 | 202.966 |
| 22 | ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು | 2851–00–107–0–26(251) | 9.61 | 8.827 |
| ಒಟ್ಟು | | | **632.04** | **591.363** |
| ಜಿಲ್ಲೆಯ ಒಟ್ಟು | | | **1459.381** | **1384.271** |

4(1)(ಬಿ) (vi) ವಿವಿಧ ಕಚೇರಿಗಳಲ್ಲಿ ನಿರ್ವಹಿಸಲಾಗುವ ದಾಖಲೆ ಮತ್ತು ದಸ್ತಾವೇಜುಗಳು:

ಅ) ರೇಷ್ಮೆ ಕೃಷಿ ಕ್ಷೇತ್ರಗಳು:–

1) ಕಚೇರಿಯ ಲೇಖನ ಸಾಮಗ್ರಿಗಳ ಖರೀದಿಯ ಕಡತಗಳು
2) ಪ್ಲಾಟ್ ವಹಿ
3) ಕೊಟ್ಟಿಗೆ ಗೊಬ್ಬರ ವಹಿ
4) ಚಾಕಿ ವಹಿ – ಸಾಕಾಣಿಕಾ– ವಿಲೇವಾರಿ–ಬೆಳೆ
5) ರಾಸಾಯನಿಕ ಗೊಬ್ಬರದ ವಹಿ
6) ನರ್ಸರಿ ವಹಿ
7) ಸೋಂಕು ನಿವಾರಕ ವಹಿ
8) ಪ್ಯಾರಾಪಿನ್ ಪೇಪರ್ ನಿರ್ವಹಿಸುವ ವಹಿ.
9) ಹಾಸಿಗೆ ಸೋಂಕುನಿವಾರಕ ವಹಿ
10) ಹಿಪ್ಪುನೇರಳೆ ಉಪಯೋಗಕ್ಕಾಗಿ ಕೀಡನಾಶಕ–ಕಳೆನಾಶಕ ಬಳಸಿರುವ ವಹಿ.

ಆ) ತಾಂತ್ರಿಕ ಸೇವಾ ಕೇಂದ್ರಗಳು:

1) ರೇಷ್ಮೆ ಬೆಳೆಗಳ ವಿಸ್ತೀರ್ಣ ಮತ್ತು ವಿವರಗಳ ಕುಳವಾರು ವಹಿ
2) ರಾಜ್ಯ ವಲಯ ಕಾರ್ಯಕ್ರಮಗಳ ಕಡತಗಳು
3) ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳ ಕಡತಗಳು.
4) ಕಟ್ಟಡದ ಬಾಡಿಗೆ ಮಂಜೂರಾತಿ
5) ಅನುದಾನ ಬಿಡುಗಡೆಗೆ ಸಂಬಂಧಿಸಿದ ವಹಿ
6) ಎಂಪಿಕ್ ಪ್ರಗತಿ ವರದಿಗಳ ವಹಿ
7) ಯೋಜನೆಗಳಿಗೆ ಸಂಬಂಧಿಸಿದ ಪ್ರಗತಿ ವರದಿಗಳು
8) ಸಾದಿಲ್ವಾರು ವೆಚ್ಚದ ವಹಿ
9) ಚಲನ–ವಲನ ವಹಿ
10) ಯೋಜನೆಗಳಿಗೆ ಸಂಬಂಧಿಸಿದ ಆಯವ್ಯಯ
11) ಬೆಳೆ ಹಾನಿಗೆ ಸಂಬಂಧಿಸಿದ ವಹಿ.
12) ಯೋಜನೆಯ ಅನುಷ್ಟಾನ ಕುರಿತಂತೆ ಮಾರ್ಗಸೂಚಿ, ವಿವಿಧ ಪ್ರಸ್ತಾವನೆಗಳಿಗೆ ನೀಡಲಾದ ಮಂಜೂರಾತಿ.
13) ಅನುಮೋದಿತ ಕ್ರಿಯಾ ಯೋಜನೆ
14) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದ ವಹಿ
15) ಮಾಹಿತಿ ಹಕ್ಕು ಸಂಬಂಧಿಸಿದ ವಹಿ
16) ರೇಷ್ಮೆ ಬೆಳೆಗಳಿಗೆ ಸಂಬಂಧಿಸಿದ ವಹಿ
17) ಆಸ್ತಿ ವಹಿ
18) ಮೂಲಭೂತ ಸೌಕರ್ಯಗಳ ವಹಿ
19) ತಾಂತ್ರಿಕ ವಿಷಯಕ್ಕೆ ಕುರಿತಂತೆ ಕೈಗೊಳ್ಳಲಾದ ಪ್ರಮುಖ ನಿರ್ಧಾರಗಳಿಗೆ ಸಂಬಂಧಿದ ವಹಿ.

ಇಲಾಖೆಯ ಎಲ್ಲಾ ಕಾರ್ಯಾಲಯದಲ್ಲಿ ಕೆ.ಸಿ.ಎಸ್.ಆರ್. ಸಿ.ಸಿ.ಎ, ನಡತೆ ನಿಯಮಾವಳಿ, ಕಚೇರಿ ಕೈಪಿಡಿ, ಕರ್ನಾಟಕ ಆರ್ಥಿಕ ಸಂಹಿತೆ ಸಾದಿಲ್ವಾರುವೆಚ್ಚದ ಕೈಪಿಡಿ ನಿಯಮಗಳನುಸಾರ ವಹಿಗಳನ್ನು ನಿರ್ವಹಿಸಲಾಗುತ್ತದೆ.

**4(1)(ಬಿ) (vii) ಇಲಾಖೆಯ ಕಾರ್ಯಕ್ರಮ ರೂಪಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ ಸಾರ್ವಜನಿಕ ಸಲಹೆ ಮತ್ತು ಭಾಗವಹಿಸುವಿಕೆಗೆ ಅವಕಾಶ ಇರುವ ಬಗ್ಗೆ ವಿವರಗಳು:**

ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯತ್ ಸಭೆಗಳಲ್ಲಿ ಚರ್ಚಿಸಿ, ಅನುಮೋದನೆಗೊಂಡ ನಂತರ ಅನುಷ್ಠಾನಗೊಳಿಸಲಾಗುತ್ತದೆ. ಫಲಾನುಭವಿ ಆಧಾರಿತ ಕಾರ್ಯಕ್ರಮಗಳಲ್ಲಿ ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಮಾಡಲಾಗುತ್ತಿದೆ. ಫಲಾನುಭವಿಗಳಿಗೆ ನೀಡುವ ಸಹಾಯಧನವನ್ನು ಸಭೆ/ ಸಮಾರಂಭಗಳಲ್ಲಿ ಜನಪ್ರತಿನಿಧಿಗಳ ಸಮಕ್ಷಮದಲ್ಲಿ ವಿತರಿಸುವ ಕ್ರಮ ಅನುಸರಿಸಲಾಗುತ್ತಿದೆ.

**4(1)(ಬಿ) (viii) ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ವಿವರಗಳು**

**ರೇಷ್ಮೆ ಉಪ ನಿರ್ದೇಶಕರ ಕಚೇರಿ, (ಜಿ.ಪಂ) ರಾಮನಗರ ದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ವಿವರ:**

| ಅಧಿಕಾರಿ / ಸಿಬ್ಬಂದಿಗಳ ಹೆಸರು (ಶ್ರೀಯುತ/ಶ್ರೀಮತಿ) | ಪದನಾಮ |
|---|---|
| ಸಿ.ಡಿ.ಬಸವರಾಜು | ರೇಷ್ಮೆ ಉಪ ನಿರ್ದೇಶಕರು |
| ಎನ್.ಜಿ.ಲೋಕೇಶ್ | ಅಧೀಕ್ಷಕರು |
| ಕಿರಣ್‌ಕುಮಾರ್. | ಪ್ರಥಮ ದರ್ಜೆ ಸಹಾಯಕರು |
| ಸಂದೀಪ್‌ಕುಮಾರ್ | ದ್ವಿತೀಯ ದರ್ಜೆ ಸಹಾಯಕರು |
| ಲಕ್ಷ್ಮೀನಾರಾಯಣ | ರೇಷ್ಮೆ ಪ್ರವರ್ತಕರು |

**4(1)(ಬಿ) (ix) ಪ್ರತಿಯೊಬ್ಬ ಅಧಿಕಾರಿ / ಸಿಬ್ಬಂದಿ ಮಾಹೆವಾರು ಪಡೆಯುತ್ತಿರುವ ವೇತನ, ಭತ್ಯೆ, ಪರಿಹಾರ ಪದ್ದತಿ ಕುರಿತು ವಿವರಗಳು**

**ರೇಷ್ಮೆ ಉಪ ನಿರ್ದೇಶಕರ ಕಚೇರಿ, (ಜಿ.ಪಂ) ರಾಮನಗರ ದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ವೇತನದ ವಿವರಗಳು**

| ಕ್ರ.ಸಂ. | ಅಧಿಕಾರಿ / ಸಿಬ್ಬಂದಿಗಳ ಹೆಸರು (ಶ್ರೀಯುತ/ಶ್ರೀಮತಿ) | ಪದನಾಮ | ಒಟ್ಟು ವೇತನ (ರೂ.ಗಳಲ್ಲಿ) |
|---|---|---|---|
| 1 | ಸಿ.ಡಿ.ಬಸವರಾಜು | ರೇಷ್ಮೆ ಉಪ ನಿರ್ದೇಶಕರು | 131314/- |
| 2 | ಎನ್.ಜಿ.ಲೋಕೇಶ್ | ಅಧೀಕ್ಷಕರು | 86415/- |
| 3 | ಕಿರಣ್‌ಕುಮಾರ್. | ಪ್ರಥಮ ದರ್ಜೆ ಸಹಾಯಕರು | 45477/- |
| 4 | ಸಂದೀಪ್‌ಕುಮಾರ್ | ದ್ವಿತೀಯ ದರ್ಜೆ ಸಹಾಯಕರು | 39582/- |
| 5 | ಲಕ್ಷ್ಮೀನಾರಾಯಣ | ರೇಷ್ಮೆ ಪ್ರವರ್ತಕರು | 41465/- |

4(1)(ಬಿ) (xvi) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಪದನಾಮ ಮತ್ತು ಇತರೆ ವಿವರಣೆಗಳು

ಅಧಿಸೂಚನೆ

ಕೇಂದ್ರ ಮಾಹಿತಿ ಹಕ್ಕು ಅಧಿನಿಯಮ 2005ರ) **The Right to information Act 2005) ( Act No.22 of 2005)** ಕಲಂ 5(1) 5(2) ಹಾಗೂ 19 (1) ರಡಿ ರಾಮನಗರ ಜಿಲ್ಲೆ ರೇಷ್ಮೆ ಇಲಾಖೆಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ (**Public Information officer)** ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ (**Assistant Public Information Officer)** ನೇಮಿಸಿ ಆದೇಶಿಸಲಾಗಿದೆ. ಸದರಿ ಅಧಿನಿಯಮದಡಿ ನಿಗದಿಪಡಿಸಲಾದಂತೆ ಸಾರ್ವಜನಿಕರಿಗೆ ಮಾಹಿತಿ ನೀಡುವ ಎಲ್ಲಾ ಕಾರ್ಯಗಳನ್ನು ಚಾಚು ತಪ್ಪದೇ ತಕ್ಷಣದಿಂದ ಜಾರಿಗೆ ಬರುವಂತೆ ನಿರ್ವಹಿಸಲು ಈ ಎಲ್ಲಾ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಕಲಂ 5(1) ಕೆಳಗೆ ಅಧಿಕಾರಿಗಳನ್ನು ರಾಮನಗರ ಜಿಲ್ಲೆ ರೇಷ್ಮೆ ಇಲಾಖೆಯ ಅವರವರ ಕಾರ್ಯ ವ್ಯಾಪ್ತಿಹಯೊಳಗೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ ನೇಮಿಸಿ ಆದೇಶಿಸಿದೆ.

| ಕ್ರ. ಸಂ. | ಪದನಾಮ | ಮಾಹಿತಿ ಅಧಿಕಾರಿಗಳು | ಕಾರ್ಯ ವ್ಯಾಪ್ತಿ |
|---|---|---|---|
| 1 | ರೇಷ್ಮೆ ಉಪ ನಿರ್ದೇಶಕರು | ಸಾರ್ವಜನಿಕ ಮಾಹಿತಿ ಅಧಿಕಾರಿ | ರಾಮನಗರ ಜಿಲ್ಲೆ ವ್ಯಾಪ್ತಿಗೆ ಸಂಬಂಧಿಸಿದ ಎಲ್ಲಾ ತಾಂತ್ರಿಕ ಮತ್ತು ಆಡಳಿತಾತ್ಮಕ ವಿಷಯಗಳು |
| 2 | ರೇಷ್ಮೆ ಸಹಾಯಕ ನಿರ್ದೇಶಕರು | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ರಾಮನಗರ, ಕನಕಪುರ & ಚನ್ನಪಟ್ಟಣ ತಾಲ್ಲೂಕುಗಳು |
| 3 | ರೇಷ್ಮೆ ವಿಸ್ತರಣಾಧಿಕಾರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಬನ್ನಿಕುಪ್ಪೆ/ಶ್ಯಾನುಬೋಗನಹಳ್ಳಿ, ಮಾಯಗಾನಹಳ್ಳಿ, ಲಕ್ಷ್ಮೀಪುರ, ಕನಕಪುರ, ಹಾರೋಹಳ್ಳಿ, ಸಂತೇಕೋಡಿಹಳ್ಳಿ, ದೊಡ್ಡಾಲಹಳ್ಳಿ, ದೊಡ್ಡಮರಳವಾಡಿ, ಹೊಂಗನೂರು, ಕೋಡಂಬಳ್ಳಿ, ಬೇವೂರು, ತಿಟ್ಟಮಾರನಹಳ್ಳಿ |

ಕಲಂ 19(1) ರ ಕೆಳಗೆ ಈ ಕೆಳಕಂಡ ಅಧಿಕಾರಿಗಳನ್ನು ರೇಷ್ಮೆ ಇಲಾಖೆಯ ಅವರವರ ಕಾರ್ಯವ್ಯಾಪ್ತಿಯೊಳಗೆ ಅಪೀಲು ಪ್ರಾಧಿಕಾರಿಗಳನ್ನಾಗಿ ನೇಮಿಸಿ ಆದೇಶಿಸಿದೆ.

| ಕ್ರ. ಸಂ. | ಪದನಾಮ | ಅಪೀಲು ಪ್ರಾಧಿಕಾರ | ಕಾರ್ಯ ವ್ಯಾಪ್ತಿ |
|---|---|---|---|
| 1 | ವಿಭಾಗೀಯ ರೇಷ್ಮೆ ಜಂಟಿ ನಿರ್ದೇಶಕರು | ಅಪೀಲು ಪ್ರಾಧಿಕಾರಿಗಳು | ರಾಮನಗರ ಜಿಲ್ಲೆ ಕಾರ್ಯವ್ಯಾಪ್ತಿಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ನೀಡಿದ ಮಾಹಿತಿ ವಿರುದ್ಧ. |

**ರೇಷ್ಮೆ ಇಲಾಖೆ ವೆಬ್‌ಟ್ಸೈಟ್:http://sericulture.karnataka.gov.in/**

ರೇಷ್ಮೆ ಇಲಾಖೆಯ 2022–23ನೇ ಸಾಲಿನಲ್ಲಿ ರಾಜಯ ವಲಯದ ಫಲಾನುಭವಿಯಾಧಾರಿತ ಕಾರ್ಯಕ್ರಮಗಳು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳ ಅನುಷ್ಠಾನ ಕುರಿತು. ಸರ್ಕಾರದಿಂದ ಹೊರಡಿಸಲಾಗುವ ಆದೇಶಗಳು ರೇಷ್ಮೆ ನಿರ್ದೇಶನಾಲಯದಿಂದ ಹೊರಡಿಸಲಾಗುವ ಮಾರ್ಗಸೂಚಿಗಳು ಮತ್ತು ಆದೇಶಗಳು ಅವಶ್ಯವಿದ್ದಲ್ಲಿ ರೇಷ್ಮೆ ಇಲಾಖೆ ವೆಬ್‌ಸೈಟ್‌ನಲ್ಲಿ ನೋಡಿಕೊಳ್ಳಬಹುದಾಗಿದೆ.

**ರೇಷ್ಮೆ ಇಲಾಖೆ ವೆಬ್‌ಟ್ಸೈಟ್:http://sericulture.karnataka.gov.in/**

ರೇಷ್ಮೆ ಉಪ ನಿರ್ದೇಶಕರು
ಜಿಲ್ಲಾ ಪಂಚಾಯತ್,
ರಾಮನಗರ